# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಎಂದಿನಂತೆ ದಿನಾಂಕ: 17.09.2022 ರಂದು ಬೆಳಗ್ಗೆ 11.00 ಗಂಟೆಗೆ ಅಧ್ಯಕ್ಷರ ಆಗಮನದೊಂದಿಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

1. ಶ್ರೀ.ರಮೇಶ್ ಎನ್. ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಶ್ರೀಮತಿ. ನಿರ್ಮಲ ಕೆ. ಕಂದಾಯ ಪರಿವೀಕ್ಷಕರು ವಾರ್ಡ್ ನಂ.42.
3. ಶ್ರೀ.ಮಂಜುನಾಥ್.ಬಿ.ಸಿ. ಕಿರಿಯ ಅಭಿಯಂತರರು, ಬೆಸ್ಕಾಂ, ವಾರ್ಡ್ ನಂ.42.
4. ಶ್ರೀ. ಮಧುಸುಧನ್, ನೀರಿನ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ. ನಾರಾಯಣ ಸ್ವಾಮಿ, ಸೂಪರ್ ವೈಸರ್ ಎಸ್. ಡಬ್ಲ್ಯೂ.ಎಂ.
6. ಶ್ರೀ. ದೇವರಾಜು, ಮೇಲ್ವಿಚಾರಕರು, ವಾರ್ಡ್ ನಂ.42.
7. ಶ್ರೀ. ನಾರಾಯಣ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
8. ಶ್ರೀಮತಿ. ವಲರ್ಮದಿ, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.42.
9. ಶ್ರೀ. ನಾಗರಾಜು, ಸೂಪರ್ ವೈಸರ್.
10. ಶ್ರೀ. ಮುತ್ಯಾಲಪ್ಪ, ಸೂಪರ್ ವೈಸರ್.
11. ಶ್ರೀಮತಿ. ಪ್ರಮಿಳ ಎಂ.ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
12. ಶ್ರೀಮತಿ.ಧಾಕ್ಷಾಯಣಿ, ಎಂ. .ಸಿ. ಲಿಂಕ್ ವರ್ಕರ್ಸ್, ಎಸ್.ಡಬ್ಲ್ಯೂ.ಎಂ.
13. ಶ್ರೀ. ರಾಕೇಶ್.ಈ, ನೀರು ಸರಬರಾಜುರಾರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
14. ಶ್ರೀ.ಸಿ.ರವಿ, ಆರ್.ಎಂ.ಸಿ.ಯಾರ್ಡ್ ಪೋಲೀಸ್ ಠಾಣೆ,
15. ವಾರ್ಡಿನ ಎಲ್ಲಾ ಅಧ್ಯಕ್ಷರು, ಮಹಿಳಾ ಪದಾಧಿಕಾರಿಗಳು ಆಗಮಿಸಿದ್ದರು.

ಸಭೆಗೆ ಗೈರು ಹಾಜರಿದ್ದ ಅಧಿಕಾರಿಗಳು:-

01. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆ ಅಧಿಕಾರಿಗಳು
02. ಬೀದಿ ದೀಪಗಳ ಪರಿವೀಕ್ಷಕರು
03. ಪಶು ಸಂಗೋಪನೆ ಇಲಾಖೆ ವಾರ್ಡ್-42.
04. ಅಗ್ನಿ ಶಾಮಕ ಠಾಣೆ, ಟಿ.ವಿ.ಎಸ್.ಕ್ರಾಸ್ ಪೀಣ್ಯ,

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಶ್ರೀಮತಿ.ಜ್ಯೋತಿ.ಕೆ. ರವರು ಮಾತನಾಡಿ ಜೈಭುವನೇಶ್ವರಿ ನಗರ ಹಾಗೂ ಬುದ್ಧನಗರದಲ್ಲಿ ಸಾಕಷ್ಟು ಕಸ ಬಿದ್ದಿದ್ದು, ಅದನ್ನು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತೆರವುಗೊಳಿಸಲು ಕೋರಿದರು.

**ಕ್ರಮ : ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನತ್ಯಾಜ್ಯ)**

ಶ್ರೀಮತಿ.ಇಂದಿರಾ. ರವರು ಮಾತನಾಡಿ ಸ್ಲಂ ಪ್ರದೇಶಗಳಲ್ಲಿ ಕೊಳಚೆ ನೀರು ನಿಂತುಕೊಂಡು ಅದರ ಮೇಲೆ ಸೊಳ್ಳೆಗಳು ಉತ್ಪತ್ತಿಯಾಗುತ್ತಿದ್ದು, ಸಾರ್ವಜನಿಕರಿಗೆ ಇದರಿಂದ ತುಂಬಾ ತೊಂದರೆಯುಂಟಾಗುತ್ತಿದ್ದು, ಕೂಡಲೇ ಔಷಧಿ ಸಿಂಪಡಿಸಲು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ತಿಳಿಸಲಾಯಿತು.

**ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್‌-42.**

ಶ್ರೀ. ಶಶಿಕುಮಾರ್ ರವರು ಮಾತನಾಡಿ ವಿಧಾನ ಸೌಧ ಲೇಔಟ್‌ನಲ್ಲಿ ಬೆಸ್ಕಾಂ ಇಲಾಖೆ ರವರು ಎ.ಬಿ.ಸಿ ಕೇಬಲ್‌ಗೆ ಮರದಕೊಂಬೆ ಅಡ್ಡವಾಗಿರುವುದರಿಂದ ಅದನ್ನು ಕಡಿದು ಅಲ್ಲಿಯೇ ಬಿಟ್ಟಿರುವುದಾಗಿ ತಿಳಿಸಿದರು, ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದ್ದು, ಕೂಡಲೇ ಅದನ್ನು ತೆರವುಗೊಳಿಸಲು ಸಂಬಂಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಎನ್-4 ಉಪ ವಿಭಾಗ**

ಶ್ರೀ.ಚೇತನ್‌ರವರು ಮಾತನಾಡಿ ಇ.ಎಸ್.ಐ.ಸಿ. ಆಸ್ಪತ್ರೆಯ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗಿದ್ದು, ಪದೇ ಪದೇ ಈ ವಿಷಯದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಗೊಂಡಿದ್ದರೂ ಸಹ ಯಾವುದೇ ಕ್ರಮ ಈ ವರೆಗೂ ಕೈಗೊಂಡಿಲ್ಲ ಆದ್ದರಿಂದ ಕೂಡಲೇ ಸಂಬಂದಪಟ್ಟ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲಾಯಿತು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್, ರಾ.ರಾ.ನಗರ ವಲಯ ಬಿ.ಬಿ.ಎಂ.ಪಿ**

ಕೊನೆಯಲ್ಲಿ ಬಿಬಿಎಂಪಿ ಯ 2022ರ ಚುನಾವಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ /ಮತದಾರರಿಗೆ ತಮ್ಮ ಮತದಾರರ ಗುರುತಿನ ಚೀಟಿಗೆ ಆಧಾರ ಜೋಡಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದ್ದು, ವಾರ್ಡ್‌ನ ಶಾಲೆಗಳಲ್ಲಿ ಕ್ಯಾಂಪ್‌ಗಳನ್ನು ನಡೆಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆಧಾರ್ ಜೋಡಣೆಯನ್ನು ಯಶಸ್ವಿಗೊಳಿಸಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರಿಗೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Manjunath K
20/09

**(ಶ್ರೀ. ಮಂಜುನಾಥ ಕೆ.)**
**ಸಹಾಯಕ ಅಭಿಯಂತರರು**
**ಮತ್ತು ಕಾರ್ಯದರ್ಶಿ**
**ವಾರ್ಡ್‌-42.**

**(ಶ್ರೀ.ಎನ್.ರಮೇಶ್)** 20/9/22
**ಸಹಾಯಕ ಕಂದಾಯ ಅಧಿಕಾರಿಗಳು**
**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**

**ಪ್ರತಿಯನ್ನು:-**

1. **ವಲಯ ಆಯುಕ್ತರು, ರಾರಾನವ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.**
2. **ವಲಯ ಜಂಟಿ ಆಯುಕ್ತರು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.**
3. **ಅಧೀಕ್ಷಕ ಅಭಿಯಂತರರು, ವಾರ್ಡ್‌ಕಮಿಟಿ ಮೇಲುಸ್ತುವಾರಿ ಅಧಿಕಾರಿಗಳು, ರಾರಾನವ ರವರ ಅವಗಾಹನೆಗೆ ಸಲ್ಲಿಸಿದೆ.**